# ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ

# ನಾಗರೀಕ ಸನ್ನದು

ವಿಜ್ಞಾನ ಮತ್ತು ತಂತ್ರಜ್ಞಾನಗಳಿಗೆ ಉತ್ತೇಜನ ನೀಡಲು ಮತ್ತು ಜನಸಾಮಾನ್ಯರಲ್ಲಿ ಅದರಲ್ಲೂ ವಿಶೇಷವಾಗಿ ಕರ್ನಾಟಕದ ಗ್ರಾಮೀಣ ಭಾಗದ ಜನರಲ್ಲಿ ವಿಜ್ಞಾನವನ್ನು ಜನಪ್ರಿಯಗೊಳಿಸಲು, ಕರ್ನಾಟಕ ಸರ್ಕಾರವು ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯನ್ನು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯಡಿಯಲ್ಲಿ ಸ್ಥಾಪಿಸಿದೆ.

**ಸ್ಥಾಪನೆ:** ಜುಲೈ 30, 2005

**ಸರ್ಕಾರಿ ಆದೇಶ:** ವಿಯಇ ವಿತ್ರಮ 2005 ದಿನಾಂಕ 30.07.2005

**ನೊಂದಾಯಿತ ಸಂಸ್ಥೆ:** ಕರ್ನಾಟಕ ಸಂಘ ನಿಯಮಾವಳಿ 1960ರಡಿಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಸ್ವಾಯತ್ತ ಸಂಸ್ಥೆಯಾಗಿ ಏಪ್ರಿಲ್ 06, 2009 ರಂದು ನೊಂದಾಯಿಸಲಾಗಿದೆ.

**ಸದಸ್ಯತ್ವ:** ಹೆಸರಾಂತ ವಿಜ್ಞಾನಿಗಳು ಮತ್ತು ಶಿಕ್ಷಣ ತಜ್ಞರು, ಸರ್ಕಾರದ ವಿವಿಧ ಇಲಾಖೆಗಳ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು ಹಾಗೂ ವೈಜ್ಞಾನಿಕ ಸಂಸ್ಥೆಗಳ ಪ್ರತಿನಿಧಿಗಳನ್ನು ಒಳಗೊಂಡಿರುವಂತೆ ಅಕಾಡೆಮಿಯ ಸದಸ್ಯರನ್ನು ಕರ್ನಾಟಕ ಸರ್ಕಾರವು ನಾಮಕರಣ ಮಾಡುತ್ತದೆ.

**ಅಧ್ಯಕ್ಷರು:** ಪ್ರೊ. ಯು. ಆರ್. ರಾವ್, ಮಾಜಿ ಅಧ್ಯಕ್ಷರು, ಇಸ್ರೊ/ಕಾರ್ಯದರ್ಶಿ, ಅಂತರಿಕ್ಷ ಇಲಾಖೆ, ಭಾರತ ಸರ್ಕಾರ

**ಸದಸ್ಯರು:** 18 (ಅಧ್ಯಕ್ಷರು ಸೇರಿ)

**ದೂರದೃಷ್ಟಿ:** ವಿಜ್ಞಾನ ಮತ್ತು ತಂತ್ರಜ್ಞಾನಗಳಿಂದಾಗುವ ಪ್ರಯೋಜನಗಳನ್ನು ಸಮರ್ಪಕವಾಗಿ ಬಳಸಿಕೊಂಡು ಜ್ಞಾನ ಸಮೃದ್ಧ ಶಾಂತಿ ಪ್ರಿಯ ಸದೃಢ ಸಮಾಜವನ್ನು ಕಟ್ಟಲು ಅವಕಾಶ ಮಾಡಿಕೊಡುವುದು

**ಧ್ಯೇಯ:** ರಾಜ್ಯದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನಗಳ ಬೆಳವಣಿಗೆಗೆ ಪೂರಕವಾದ ಕಾರ್ಯಕ್ರಮಗಳನ್ನು ಅಭಿವೃದ್ಧಿಪಡಿಸುವುದು, ಸಂಯೋಜಿಸುವುದು ಮತ್ತು ನಿರ್ವಹಣೆ ಮಾಡುವುದು. ವಿಜ್ಞಾನ ಮತ್ತು ತಂತ್ರಜ್ಞಾನಗಳ ಉಪಯೋಗಗಳನ್ನು ವಿದ್ಯಾರ್ಥಿಗಳಿಗೆ, ಶಿಕ್ಷಕರಿಗೆ ಮತ್ತು ಜನಸಾಮಾನ್ಯರಿಗೆ ಅದರಲ್ಲೂ ಗ್ರಾಮೀಣ ಪ್ರದೇಶಗಳಲ್ಲಿ ಪ್ರಸರಿಸುವುದು

**ಕಾರ್ಯಕ್ರಮಗಳ ಬಗ್ಗೆ ಮಾಹಿತಿ:**

1. **ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ ಶಿಷ್ಯವೇತನ**

   **ಫಲಾನುಭವಿಗಳು**: ವಿಜ್ಞಾನ ಪದವಿ ಮತ್ತು ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳು

   **ವ್ಯಾಪ್ತಿ:** ಬೆಂಗಳೂರು ವಿಶ್ವವಿದ್ಯಾನಿಲಯ, ಮೈಸೂರು ವಿಶ್ವವಿದ್ಯಾನಿಲಯ, ಮಂಗಳೂರು ವಿಶ್ವವಿದ್ಯಾನಿಲಯ, ಗುಲ್ಬರ್ಗಾ ವಿಶ್ವವಿದ್ಯಾನಿಲಯ, ಕುವೆಂಪು ವಿಶ್ವವಿದ್ಯಾನಿಲಯ, ಕರ್ನಾಟಕ್ ವಿಶ್ವವಿದ್ಯಾನಿಲಯ, ಮಹಿಳಾ ವಿಶ್ವವಿದ್ಯಾನಿಲಯ, ತುಮಕೂರು ವಿಶ್ವವಿದ್ಯಾನಿಲಯ ಮತ್ತು ದಾವಣಗೆರೆ ವಿಶ್ವವಿದ್ಯಾನಿಲಯ

   **ಆಯ್ಕೆ ಪ್ರಕ್ರಿಯೆ:**

   - ಅರ್ಹ ವಿದ್ಯಾರ್ಥಿಗಳ ಪಟ್ಟಿಯನ್ನು ಆಯಾಯ ವಿಶ್ವವಿದ್ಯಾನಿಲಯಗಳಿಂದ ತರಿಸಿಕೊಳ್ಳಲಾಗುವುದು
   - ಅರ್ಹತೆಯ ನಿಬಂಧನೆಗಳಿಗೆ ಅಂತರ್ಜಾಲ ತಾಣದ ಶಿಷ್ಯವೇತನ ಪುಟವನ್ನು ವೀಕ್ಷಿಸಿ

2. **ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ವಿಜ್ಞಾನ ವಿಶೇಷ ಉಪನ್ಯಾಸ ಮಾಲೆ**

   **ಫಲಾನುಭವಿಗಳು**: ವಿಜ್ಞಾನ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳು (ಸಸ್ಯ ವಿಜ್ಞಾನ, ಪ್ರಾಣಿ ವಿಜ್ಞಾನ, ರಸಾಯನ ವಿಜ್ಞಾನ, ಭೌತ ವಿಜ್ಞಾನ, ತೋಟಗಾರಿಕೆ/ಕೃಷಿ ವಿಜ್ಞಾನ ಮತ್ತು ಆಹಾರ ವಿಜ್ಞಾನ

   **ವ್ಯಾಪ್ತಿ:** ಬೆಂಗಳೂರು ವಿಶ್ವವಿದ್ಯಾನಿಲಯ, ಮೈಸೂರು ವಿಶ್ವವಿದ್ಯಾನಿಲಯ, ಮಂಗಳೂರು ವಿಶ್ವವಿದ್ಯಾನಿಲಯ, ಗುಲ್ಬರ್ಗಾ ವಿಶ್ವವಿದ್ಯಾನಿಲಯ, ಕುವೆಂಪು ವಿಶ್ವವಿದ್ಯಾನಿಲಯ, ಕರ್ನಾಟಕ್ ವಿಶ್ವವಿದ್ಯಾನಿಲಯ, ಮಹಿಳಾ ವಿಶ್ವವಿದ್ಯಾನಿಲಯ, ತುಮಕೂರು ವಿಶ್ವವಿದ್ಯಾನಿಲಯ ಮತ್ತು ತೋಟಗಾರಿಕೆ ವಿಶ್ವವಿದ್ಯಾನಿಲಯ (ಬಾಗಲಕೋಟೆ)

   **ಆಯ್ಕೆ ಪ್ರಕ್ರಿಯೆ**: ಅಕಾಡೆಮಿಯು ಆಯಾಯ ವಿಶ್ವವಿದ್ಯಾನಿಲಯದ ವಿಭಾಗಗಳ ಸಹಯೋಗದಲ್ಲಿ ಸಸ್ಯ ವಿಜ್ಞಾನ, ಪ್ರಾಣಿ ವಿಜ್ಞಾನ, ರಸಾಯನ ವಿಜ್ಞಾನ, ಭೌತ ವಿಜ್ಞಾನ, ತೋಟಗಾರಿಕೆ ಅಥವಾ ಕೃಷಿ ವಿಜ್ಞಾನ ಮತ್ತು ಆಹಾರ ವಿಜ್ಞಾನ ವಿಷಯಗಳಲ್ಲಿ ಉಪನ್ಯಾಸ ಮಾಲೆ ನಡೆಸುವುದು

3. **ಪದವಿ ಕಾಲೇಜುಗಳ ವಿಜ್ಞಾನ ಅಧ್ಯಾಪಕರಿಗೆ ಕಾರ್ಯಾಗಾರ**

   **ಫಲಾನುಭವಿಗಳು**: ವಿಜ್ಞಾನ ಪದವಿ ಉಪನ್ಯಾಸಕರು

   **ವ್ಯಾಪ್ತಿ:** ಕರ್ನಾಟಕ ರಾಜ್ಯ

   **ಆಯ್ಕೆ ಪ್ರಕ್ರಿಯೆ**: ಪ್ರತಿ ಕಾರ್ಯಾಗಾರಕ್ಕೆ 25-30 ಉಪನ್ಯಾಸಕರ ಪಟ್ಟಿಯನ್ನು ಕಾಲೇಜು ಶಿಕ್ಷಣ ಇಲಾಖೆಯ ನಿರ್ದೇಶಕರಿಂದ ಕೋರಿ ಪಡೆಯಲಾಗುವುದು

## 4. ವಿಜ್ಞಾನ ಲೋಕ ತ್ರೈಮಾಸಿಕ ಸಂಚಿಕೆ

**ಫಲಾನುಭವಿಗಳು**: ಪದವಿ ಪೂರ್ವ ಮತ್ತು ಪದವಿ ವಿದ್ಯಾರ್ಥಿಗಳು ಹಾಗೂ ಉಪನ್ಯಾಸಕರು ಮತ್ತು ಜನಸಾಮಾನ್ಯರು

**ವೇಳಾ ಪಟ್ಟಿ**: ಪ್ರತಿ ವರ್ಷ ಫೆಬ್ರವರಿ, ಮೇ, ಆಗಸ್ಟ್ ಮತ್ತು ನವೆಂಬರ್ ಮಾಹೆಯಲ್ಲಿ ಪ್ರಕಟ

**ವ್ಯಾಪ್ತಿ:** ಕರ್ನಾಟಕ ರಾಜ್ಯ

**ಹಂಚಿಕೆ**: ಸಂಚಿಕೆಯ ಪ್ರತಿಗಳನ್ನು ಪ್ರಾದೇಶಿಕ ಮತ್ತು ಉಪಪ್ರಾದೇಶಿಕ ವಿಜ್ಞಾನ ಕೇಂದ್ರಗಳಿಗೆ, ಗ್ರಂಥಾಲಯಗಳಿಗೆ ಹಾಗೂ ಇನ್ನಿತರೆ ಸಂಘ-ಸಂಸ್ಥೆಗಳಿಗೆ ಉಚಿತವಾಗಿ ಕಳುಹಿಸಿಕೊಡಲಾಗುತ್ತಿದೆ. 2012ರಿಂದ ಪದವಿ ಮತ್ತು ಪದವಿ ಪೂರ್ವ ಕಾಲೇಜುಗಳಿಗೂ ಸಹ ಕಳುಹಿಸಿಕೊಡಲಾಗುವುದು.

## 5. ಪ್ರೌಢಶಾಲೆಗಳಿಗೆ ವಿಜ್ಞಾನ ಪ್ರಯೋಗ ಪರಿಕರ ವಿತರಣೆ

**ಫಲಾನುಭವಿಗಳು**: ಪ್ರೌಢಶಾಲೆ ವಿದ್ಯಾರ್ಥಿಗಳು ಮತ್ತು ಶಿಕ್ಷಕರು. 2011-12ನೇ ಸಾಲಿನಲ್ಲಿ ರಾಜ್ಯದಲ್ಲಿ ಒಟ್ಟು 175 ಪ್ರೌಢಶಾಲೆಗಳು ಈ ಕಾರ್ಯಕ್ರಮದ ಪ್ರಯೋಜನ ಪಡೆಯಲಿವೆ

**ವ್ಯಾಪ್ತಿ:** ಅಕಾಡೆಮಿಯು ಸಂಚಾರಿ ವಿಜ್ಞಾನ ವಸ್ತು ಪ್ರದರ್ಶನ ಕಾರ್ಯಕ್ರಮ ನಡೆಸಿದ ಜಿಲ್ಲೆಗಳಾದ ಹಾವೇರಿ, ಚಿತ್ರದುರ್ಗಾ, ಗದಗ್, ಮಂಡ್ಯ, ಚಾಮರಾಜನಗರ, ಶಿವಮೊಗ್ಗ ಮತ್ತು ಉತ್ತರಕನ್ನಡ

**ಹಂಚಿಕೆ**: ಹಾವೇರಿ, ಚಿತ್ರದುರ್ಗಾ, ಗದಗ್, ಮಂಡ್ಯ, ಚಾಮರಾಜನಗರ, ಶಿವಮೊಗ್ಗ ಮತ್ತು ಉತ್ತರಕನ್ನಡ ಜಿಲ್ಲೆಗಳಲ್ಲಿ ಸಂಚಾರಿ ವಿಜ್ಞಾನ ವಸ್ತು ಪ್ರದರ್ಶನ ವಾಹನವು ಭೇಟಿ ಕೊಟ್ಟ ಶಾಲೆಗಳಲ್ಲಿ ಆಯ್ದ 175 ಶಾಲೆಗಳಿಗೆ. ಪ್ರತಿ ಜಿಲ್ಲೆಯಲ್ಲಿ 25 ಶಾಲೆಗಳು.

## 6. ಶ್ರೇಷ್ಠ ಪುಸ್ತಕ ಪ್ರಶಸ್ತಿ - ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಕೃಷಿ ವಿಷಯದ ಕನ್ನಡ ಪುಸ್ತಕಗಳು

**ಫಲಾನುಭವಿಗಳು**: ಕೃಷಿ, ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಕನ್ನಡದಲ್ಲಿ ಪುಸ್ತಕ ಬರೆದು ಪ್ರಕಟಿಸಿರುವ ಲೇಖಕರು

**ವ್ಯಾಪ್ತಿ:** ಕರ್ನಾಟಕ ರಾಜ್ಯ

**ಪ್ರಶಸ್ತಿ**: ಒಟ್ಟು 6 ಪ್ರಶಸ್ತಿಗಳು (ಕೃಷಿ, ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಕ್ಕೆ ತಲಾ 2 ಪ್ರಶಸ್ತಿಗಳು)

**ಆಯ್ಕೆ ಪ್ರಕ್ರಿಯೆ**:

- ಪತ್ರಿಕೆಯಲ್ಲಿ ಪ್ರಕಟಣೆ - ಪ್ರತಿ ವರ್ಷ ಆಗಸ್ಟ್ ಮಾಹೆ
- ಪುಸ್ತಕ ಕಳುಹಿಸಲು ಕೊನೆಯ ದಿನ - ನವೆಂಬರ್ 30
- ಬಾಹ್ಯ ಪರಿಣಿತರಿಂದ ಮೌಲ್ಯಮಾಪನ ಮತ್ತು ಅಕಾಡೆಮಿಯ ತಜ್ಞ ಸಮಿತಿಯಿಂದ ಅನುಮೋದನೆ

- ಫೆಬ್ರವರಿ/ಮಾರ್ಚ್ ಮಾಹೆಯಲ್ಲಿ ಪ್ರಶಸ್ತಿ ಪ್ರಧಾನ
- ವಿವರಗಳಿಗೆ ಅಕಾಡೆಮಿಯ ಅಂತರ್ಜಾಲ ತಾಣದ ಪ್ರಶಸ್ತಿಗಳು ಪುಟ ವೀಕ್ಷಿಸಿ

7. **ವಿಜ್ಞಾನ ಮತ್ತು ತಂತ್ರಜ್ಞಾನ ಸಮ್ಮೇಳನ**

**ಫಲಾನುಭವಿಗಳು**: ವಿಜ್ಞಾನ ಬೋಧಕ ವರ್ಗ, ಪದವಿ ಮತ್ತು ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳು, ಸರ್ಕಾರದ ವಿವಿಧ ಇಲಾಖೆಗಳ ಅಧಿಕಾರಿ ವರ್ಗದವರು, ಜನಸಾಮಾನ್ಯರು ಮತ್ತು ಆಸಕ್ತರು ಸೇರಿ ಒಟ್ಟು 500-600 ಸಂಖ್ಯೆ

**ವ್ಯಾಪ್ತಿ:** ಕರ್ನಾಟಕ ರಾಜ್ಯ

8. **ರಾಷ್ಟ್ರೀಯ ವಿಜ್ಞಾನ ದಿನ ಹಾಗೂ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಹತ್ವದ ದಿನಗಳ ಆಚರಣೆ (ವಿಶ್ವ ಪರಿಸರ ದಿನ, ಅಂತರಾಷ್ಟ್ರೀಯ ಒಜೋನ್ ದಿನ, ವನ್ಯ ಜೀವಿ ಸಂರಕ್ಷಣಾ ದಿನ, ವಿಶ್ವ ಜಲ ದಿನ, ಭೂ ದಿನ, ಇತ್ಯಾದಿ)**

**ಫಲಾನುಭವಿಗಳು**: ವಿಜ್ಞಾನ ಪದವಿ ವಿದ್ಯಾರ್ಥಿಗಳು ಮತ್ತು ಬೋಧಕ ವರ್ಗ ಸೇರಿ 300-400 ಸಂಖ್ಯೆ

**ವ್ಯಾಪ್ತಿ:** ಕರ್ನಾಟಕ ರಾಜ್ಯ

**ಅನುದಾನ ಪಡೆಯುವ ವಿಧಾನ:** ಆಸಕ್ತ ವಿಜ್ಞಾನ ಪದವಿ ಕಾಲೇಜುಗಳು ಕಾರ್ಯಕ್ರಮ ನಡೆಸುವುದಾಗಿ ಇಚ್ಛೆ ವ್ಯಕ್ತಪಡಿಸಿ ಅಕಾಡೆಮಿಗೆ ಪ್ರಸ್ತಾವನೆ ಕಳುಹಿಸಬಹುದು ಅಥವಾ ಅಕಾಡೆಮಿಯು ಅರ್ಹ ಕಾಲೇಜುಗಳನ್ನು ಸಂಪರ್ಕಿಸಿ ಕಾರ್ಯಕ್ರಮ ನಡೆಸಲು ಕೋರಬಹುದು

9. **ಸಮ್ಮೇಳನ ಹಾಗೂ ಕಾರ್ಯಾಗಾರಗಳನ್ನು ಏರ್ಪಡಿಸಲು ಮತ್ತು ಪ್ರೋತ್ಸಾಹಿಸಲು ಅಲ್ಪ ಪ್ರಮಾಣದ ಸಹಾಯಧನ**

**ಫಲಾನುಭವಿಗಳು**: ಕಾಲೇಜುಗಳು, ಸರ್ಕಾರೇತರ ಸಂಸ್ಥೆಗಳು (ಎನ್.ಜಿ.ಓ) ಮತ್ತು ಇತರೆ ವಿಜ್ಞಾನ ಸಂಘ/ಸಂಸ್ಥೆಗಳು

**ಅನುದಾನ**: ಗರಿಷ್ಟ 25,000/-

**ವ್ಯಾಪ್ತಿ:** ಕರ್ನಾಟಕ ರಾಜ್ಯ

**ಅರ್ಜಿ ಸಲ್ಲಿಸುವ ವಿಧಾನ:** ವರ್ಷದ ಯಾವುದೇ ಸಂದರ್ಭದಲ್ಲಿ (ಏಪ್ರಿಲ್ 1 ರಿಂದ ಮಾರ್ಚ್ 30) ಆಸಕ್ತರು ಅಕಾಡೆಮಿಯು ತನ್ನ ಅಂತರ್ಜಾಲದಲ್ಲಿ ನೀಡಿರುವ ಪ್ರಸ್ತಾವನೆ ನಮೂನೆಯಲ್ಲಿ ಕಾರ್ಯಕ್ರಮದ ವಿವರ ಕಳುಹಿಸಿ ಅನುದಾನ ಕೋರಬಹುದಾಗಿದೆ

**ಆಯ್ಕೆ:** ಅಕಾಡೆಮಿಯ ತಜ್ಞ ಸಮಿತಿಯು ಅರ್ಜಿಯನ್ನು ಪರಿಶೀಲಿಸಿ ಕೋರಿಕೆಯನ್ನು ಪರಿಗಣಿಸುವ ಬಗ್ಗೆ ಮತ್ತು ಅನುದಾನದ ಮೊತ್ತದ ಬಗ್ಗೆ ನಿರ್ಧರಿಸುವುದು

**10. ವಿಜ್ಞಾನ ಪದವಿ ವಿದ್ಯಾರ್ಥಿಗಳಿಗೆ ಮುಕ್ತ ಉಪನ್ಯಾಸ ಮಾಲೆ ಕಾರ್ಯಕ್ರಮ**

ಈ ಕಾರ್ಯಕ್ರಮವನ್ನು ಮೈಸೂರು ಜಿಲ್ಲೆಯಲ್ಲಿ ಪ್ರಾಯೋಗಿಕವಾಗಿ ಈ ವರ್ಷ ಪ್ರಾರಂಭಿಸಲಾಗಿದ್ದು, ಮುಂಬರುವ ವರ್ಷಗಳಲ್ಲಿ ರಾಜ್ಯದ ಇತರ ಜಿಲೆಗಳಿಗೆ ವಿಸ್ತರಿಸಲಾಗುವುದು

**ಫಲಾನುಭವಿಗಳು**: ವಿಜ್ಞಾನ ಪದವಿ ವಿದ್ಯಾರ್ಥಿಗಳು ಮತ್ತು ಬೋಧಕ ವರ್ಗ ಸೇರಿ ಪ್ರತಿ ಉಪನ್ಯಾಸ ಮಾಲೆಯಲ್ಲಿ 300-400 ಸಂಖ್ಯೆ

**ವ್ಯಾಪ್ತಿ:** ಮೈಸೂರು ಜಿಲ್ಲೆ

**ಅನುದಾನ ಪಡೆಯುವ ವಿಧಾನ:** ಆಸಕ್ತ ವಿಜ್ಞಾನ ಪದವಿ ಕಾಲೇಜುಗಳು ಕಾರ್ಯಕ್ರಮ ನಡೆಸುವುದಾಗಿ ಇಚ್ಛೆ ವ್ಯಕ್ತಪಡಿಸಿ ಅಕಾಡೆಮಿಗೆ ಪ್ರಸ್ತಾವನೆ ಕಳುಹಿಸಬಹುದು ಅಥವಾ ಅಕಾಡೆಮಿಯು ಅರ್ಹ ಕಾಲೇಜುಗಳನ್ನು ಸಂಪರ್ಕಿಸಿ ಕಾರ್ಯಕ್ರಮ ನಡೆಸಲು ಕೋರಬಹುದು

**11. ವಿಜ್ಞಾನ ಬರಹಗಾರರಿಗೆ ಮತ್ತು ಸಂವಹನಕಾರರಿಗೆ ತರಬೇತಿ**

**ಫಲಾನುಭವಿಗಳು**: ವಿಜ್ಞಾನ ಮತ್ತು ತಂತ್ರಜ್ಞಾನ ಬರಹಗಾರರು. ಒಟ್ಟು 30 ಸಂಖ್ಯೆ

**ವ್ಯಾಪ್ತಿ:** ಕರ್ನಾಟಕ ರಾಜ್ಯ

**ಆಯ್ಕೆ:** ಅಕಾಡೆಮಿಯು ಫಲಾನುಭವಿ ಬರಹಗಾರರ ಪಟ್ಟಿಯನ್ನು ಆಯ್ಕೆ ಮಾಡುವುದು

**12. ಡಿ.ವಿ.ಡಿ.ಗಳ ಮೂಲಕ ವಿಜ್ಞಾನ ಕಲಿಕೆ**

**ಫಲಾನುಭವಿಗಳು**: ಪ್ರೌಢಶಾಲೆ ವಿದ್ಯಾರ್ಥಿಗಳು ಮತ್ತು ಶಿಕ್ಷಕರು. ಈ ವರ್ಷ ಒಟ್ಟು 900 ಶಾಲೆಗಳು

**ವ್ಯಾಪ್ತಿ:** ಕರ್ನಾಟಕ ರಾಜ್ಯ

**ಆಯ್ಕೆ:** ಕಂಪ್ಯೂಟರ್ ಮತ್ತು ಪ್ರೊಜೆಕ್ಟರ್ ಹೊಂದಿರುವ ರಾಜ್ಯದ ಸರ್ಕಾರಿ, ಅನುದಾನಿತ ಮತ್ತು ಖಾಸಗಿ ಶಾಲೆಗಳು

**ಸಂಪರ್ಕ ವಿಳಾಸ:**

**ಡಾ. ಹೆಚ್. ಹೊನ್ನೇಗೌಡ**
ನಿರ್ದೇಶಕರು (ತಾಂತ್ರಿಕ), ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಹಾಗೂ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಸದಸ್ಯ ಕಾರ್ಯದರ್ಶಿ,
ನಂ. 24/2, ವಿಜ್ಞಾನ ಭವನ, ಬಿ.ಡಿ.ಎ. ಕಾಂಪ್ಲೆಕ್ಸ್ ಹತ್ತಿರ, 21ನೇ ಮುಖ್ಯ ರಸ್ತೆ,
ಬನಶಂಕರಿ 2ನೇ ಹಂತ, ಬೆಂಗಳೂರು-560 070
ದೂರವಾಣಿ/ಫ್ಯಾಕ್ಸ್ : 080-26711160; ಅಂತರ್ಜಾಲ ತಾಣ: www.kstacademy.org
ಇ-ಮೇಲ್ : ksta.gok@gmail.com